# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
# ಮಲ್ಲೇಶ್ವರಂ, ಬೆಂಗಳೂರು - 560 003

## KARNATAKA SCHOOL EXAMINATION AND ASSESSMENT BOARD, MALLESHWARAM, BENGALURU – 560 003

## ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ, ಫೆಬ್ರವರಿ / ಮಾರ್ಚ್ — 2023

## STATE LEVEL SSLC PREPARATORY EXAMINATION, FEBRUARY / MARCH — 2023

ಸಂಕೇತ ಸಂಖ್ಯೆ : **85-K** | **Code No. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

ದಿನಾಂಕ : 04. 03. 2023 ] [ Date : 04. 03. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 80 ] [ Max. Marks : 80

---

### *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : $8 \times 1 = 8$

1. 'ನೀಲಿ ನೀರಿನ ನೀತಿ'ಯನ್ನು ಜಾರಿಗೆ ತಂದವನು

   (A) ಫ್ರಾನ್ಸಿಸ್ಕೊ ಡಿ ಆಲ್ಮೇಡ

   (B) ವಾಸ್ಕೋ ಡ ಗಾಮ

   (C) ಕೌಂಟ್ ಡಿ ಲಾಲಿ

   (D) ರಾಬರ್ಟ್ ಕ್ಲೈವ್

2. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್, ಮೇ ತಿಂಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಉಂಟಾಗುವ ಮಳೆಯನ್ನು ಕರೆದಿರುವುದು

   (A) ಆಂಡೀಸ್

   (B) ಕಾಲ ಬೈಸಾಕಿ

   (C) ಕಾಫಿ ತುಂತುರು

   (D) ಮಾವಿನ ಹೊಯ್ಲು

3. ಭಾರತದ ಹಸಿರು ಕ್ರಾಂತಿಯ ಪಿತಾಮಹ

   (A) ಸರ್ ಎಂ. ವಿಶ್ವೇಶ್ವರಯ್ಯ

   (B) ಡಾ. ಶಿವರಾಮ ಕಾರಂತ

   (C) ಡಾ. ಎಂ.ಎಸ್. ಸ್ವಾಮಿನಾಥನ್

   (D) ಸುಂದರಲಾಲ್ ಬಹುಗುಣ

4. ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಕದನ ಬಾಂಧವ್ಯತ್ರಯ ಮೈತ್ರಿಕೂಟವನ್ನು ರಚಿಸಿದ ರಾಷ್ಟ್ರಗಳು

(A) ಜರ್ಮನಿ, ಆಸ್ಟ್ರೀಯ, ಹಂಗೇರಿ

(B) ಬ್ರಿಟನ್, ಫ್ರಾನ್ಸ್, ರಷ್ಯಾ

(C) ಇಟಲಿ, ಜರ್ಮನಿ, ಆಸ್ಟ್ರಿಯ

(D) ಬ್ರಿಟನ್, ಫ್ರಾನ್ಸ್, ಜರ್ಮನಿ

5. ಡಾ. ಶಿವರಾಮ ಕಾರಂತರು ನೇತೃತ್ವ ವಹಿಸಿದ್ದ ಪರಿಸರ ಚಳವಳಿ

(A) ನರ್ಮದಾ ಬಚಾವೋ ಆಂದೋಲನ

(B) ಚಿಪ್ಕೋ ಚಳವಳಿ

(C) ಕೈಗಾ ವಿರೋಧಿ ಚಳವಳಿ

(D) ಮೌನ ಕಣವೆ ಆಂದೋಲನ

6. 'ಲಡಾಖ್' ಪ್ರಸ್ಥಭೂಮಿ ಕಂಡುಬರುವುದು

(A) ಮಧ್ಯ ಹಿಮಾಲಯಗಳಲ್ಲಿ

(B) ಮಹಾ ಹಿಮಾಲಯಗಳಲ್ಲಿ

(C) ಸಿವಾಲಿಕ್ ಬೆಟ್ಟಗಳಲ್ಲಿ

(D) ಭಾರತದ ಪರ್ಯಾಯ ಪ್ರಸ್ಥಭೂಮಿಗಳಲ್ಲಿ

7. 1948 ಡಿಸೆಂಬರ್, 10 ಒಂದು ಮಹತ್ವದ ದಿನವಾಗಿದೆ ಏಕೆಂದರೆ ಆ ದಿನ

(A) ವಿಶ್ವಸಂಸ್ಥೆ ಮಾನವ ಹಕ್ಕುಗಳನ್ನು ಉದ್ಘೋಷಿಸಿತು

(B) ವಿಶ್ವಸಂಸ್ಥೆಯ ಸ್ಥಾಪನೆಯಾಯಿತು

(C) ಮಾನವ ಹಕ್ಕುಗಳ ಒಡಂಬಡಿಕೆಗೆ ಭಾರತ ಸಹಿ ಮಾಡಿತು

(D) ಭಾರತದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಜಾರಿಗೆ ಬಂದಿತು

8. ಗ್ರಾಹಕ ಸಂರಕ್ಷಣೆಯ ಆಂದೋಲನ ಮೊದಲಿಗೆ ಪ್ರಾರಂಭವಾದ ದೇಶ

(A) ರಷ್ಯಾ

(B) ಚೀನಾ

(C) ಭಾರತ

(D) ಅಮೇರಿಕಾ ಸಂಯುಕ್ತ ಸಂಸ್ಥಾನ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **8 × 1 = 8**

9. ಡಾ. ಹರಾಲುವಿಗೆ 'ಕೈಸರ್-ಇ-ಹಿಂದ್' ಬಿರುದನ್ನು ಏಕೆ ನೀಡಿದರು ?

10. ನಿಶ್ಶಸ್ತ್ರೀಕರಣ ಪ್ರಚಲಿತ ಜಗತ್ತಿನ ಅವಶ್ಯಕತೆಯಾಗಿದೆ. ಏಕೆ ?

11. ವಿಶ್ವ ಇತಿಹಾಸದಲ್ಲಿ 15ನೇ ಮಾರ್ಚ್ 1962 ಒಂದು ಪ್ರಮುಖ ದಿನವಾಗಿ ಪರಿಣಮಿಸಿದೆ. ಏಕೆ ?

12. ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಏಕೆ ಮರಳಿದನು ?

13. ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗವು ಹೆಚ್ಚು ಮಳೆಯನ್ನು ಪಡೆಯುತ್ತದೆ. ಏಕೆ ?

14. ರಾಷ್ಟ್ರೀಯ ಯೋಜನಾ ಆಯೋಗವನ್ನು ಏಕೆ ರಚಿಸಲಾಯಿತು.

15. ಭಾರತದ ಸಂವಿಧಾನದ 17ನೇ ವಿಧಿಯ ಮಹತ್ವವೇನು ?

16. ನಿರುದ್ಯೋಗಕ್ಕೆ ಯಾವುದಾದರೂ ಎರಡು ಪ್ರಮುಖ ಕಾರಣಗಳನ್ನು ತಿಳಿಸಿ.

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**8 × 2 = 16**

17. ಭಾರತ ಮತ್ತು ಚೀನಾ ನಡುವಿನ ಬಾಂಧವ್ಯ ಹದಗೆಡಲು ಕಾರಣಗಳೇನು ?

**ಅಥವಾ**

ದ್ವಿತೀಯ ಮಹಾಯುದ್ಧದ ಬಳಿಕ ಜಾಗತಿಕವಾಗಿ ಎದುರಾದ ಮುಖ್ಯ ಸಮಸ್ಯೆಗಳಾವುವು ?

18. ದೊಂಬಿಯ ಲಕ್ಷಣಗಳೇನು ?

**ಅಥವಾ**

ವರದಕ್ಷಿಣೆಯ ದುಷ್ಪರಿಣಾಮಗಳು ಯಾವುವು ?

19. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು ಯಾವುವು ?

20. ಸರ್ಕಾರವು ವಿಧಿಸುವ ಪ್ರತ್ಯಕ್ಷ ತೆರಿಗೆಗಳು ಯಾವುವು ?

21. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳನ್ನು ತಿಳಿಸಿ.

22. ಪೂರ್ವ ಕರಾವಳಿಯ ಜನರು ಅತಿ ಹೆಚ್ಚು ನೈಸರ್ಗಿಕ ವಿಕೋಪಗಳನ್ನು ಎದುರಿಸುತ್ತಾರೆ. ಕಾರಣಗಳೊಂದಿಗೆ ವಿವರಿಸಿ.

23. ಭಾರತದಲ್ಲಿ ಕಾಗದದ ಕೈಗಾರಿಕೆಗೆ ಬೇಡಿಕೆಯು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರಲು ಕಾರಣಗಳೇನು ?

24. ಮಾರ್ತಾಂಡ ವರ್ಮನು ಭಾರತದಲ್ಲಿ ಡಚ್ಚರ ಅಧಿಕಾರದ ಅವನತಿಗೆ ಹೇಗೆ ಕಾರಣನಾದನು ?

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $9 \times 3 = 27$**

25. ಪ್ರಸ್ತುತ ಭಾರತದಲ್ಲಿ ಭೂಬಳಕೆಯ ಪ್ರಕಾರಗಳು ಯಾವುವು ?

**ಅಥವಾ**

ಭಾರತದ ಪೂರ್ವ ತೀರಗಳಲ್ಲಿ ಕಂಡಬರುವ ಪ್ರಮುಖ ಬಂದರುಗಳು ಯಾವುವು ?

26. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

**ಅಥವಾ**

ತೆರಿಗೆಯೇತರ ಆದಾಯಗಳ ಮೂಲಗಳನ್ನು ವಿವರಿಸಿ.

27. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳು ಯಾವುವು ?

**ಅಥವಾ**

ಉದ್ಯಮಶೀಲತೆಯ ಗುಣಲಕ್ಷಣಗಳು ಯಾವುವು ?

28. ಭಾರತದಲ್ಲಿ ಬ್ರಿಟಿಷರ ಭೂ ಕಂದಾಯ ನೀತಿಯ ಪರಿಣಾಮಗಳಾವುವು ?

**ಅಥವಾ**

ಭಾರತ ಒಕ್ಕೂಟಕ್ಕೆ ಹೈದರಾಬಾದ್ ಮತ್ತು ಜುನಾಗಢ್ ಹೇಗೆ ವಿಲೀನವಾದವು ?

29. ಸಂಘಟಿತ ವಲಯದ ಕೆಲಸಗಾರರು ಅಸಂಘಟಿತ ವಲಯದ ಕೆಲಸಗಾರರಿಗಿಂತ ಹೇಗೆ ಭಿನ್ನವಾಗಿದ್ದಾರೆ ?

30. "ಮೈಸೂರು ರಾಜ್ಯ ಮಾದರಿ ರಾಜ್ಯವಾಗಲು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾರಣರಾದರು" ದೃಢೀಕರಿಸಿ.

31. ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ತಿಳಿಸಿ.

32. ಸರ್ಕಾರವು ಅರಣ್ಯಗಳನ್ನು ಸಂರಕ್ಷಿಸಲು ಶ್ರಮಿಸುತ್ತಿದೆ. ದೃಢೀಕರಿಸಿ.

33. ಭಾರತದ ಇತಿಹಾಸದಲ್ಲಿ 19ನೇಯ ಶತಮಾನವನ್ನು 'ಭಾರತೀಯ ಪುನರುಜ್ಜೀವನ ಕಾಲ' ವೆಂದು ಕರೆಯಲಾಗಿದೆ. ಏಕೆ ?

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 4 × 4 = 16**

34. "ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು." ಈ ಹೇಳಿಕೆಗೆ ಪುಷ್ಟಿ ನೀಡಿ.

**ಅಥವಾ**

"ತೀವ್ರಗಾಮಿಗಳು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು." ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.

35. "ಬ್ರಿಟಿಷ್ ಶಿಕ್ಷಣವು ಭಾರತದಲ್ಲಿ ಹೊಸ ತಲೆಮಾರನ್ನು ಸೃಷ್ಟಿಸಿತು." ಈ ಹೇಳಿಕೆಯನ್ನು ಸ್ಪಷ್ಟೀಕರಿಸಿ.

36. ಭಾರತವು ಇಂದು ಎದುರಿಸುತ್ತಿರುವ ಸವಾಲುಗಳು ಯಾವುವು ?

37. ನಾವು ಮಣ್ಣಿನ ಸಂರಕ್ಷಣೆಯನ್ನು ಹೇಗೆ ಕೈಗೊಳ್ಳಬಹುದು ?

VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5

a) $82\frac{1}{2}^{o}$ ಪೂರ್ವ ರೇಖಾಂಶ

b) ವಿಶಾಖ ಪಟ್ಟಣ

c) ಭದ್ರಾವತಿ

d) ನರ್ಮದಾ ನದಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಈಡೇರಿಸುವ ವಿವಿಧ ಉದ್ದೇಶಗಳು ಯಾವುವು ? 5